# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.org ಅಂತರ್ಜಾಲ: www.bsgkarnataka.org


**ಸಂಖ್ಯೆ:**ಎಸ್‌ಹೆಚ್‌ಕ್ಯೂ/Org.1/Utsav/972/2025-26 ದಿನಾಂಕ:26.08.2025

ಜಿಲ್ಲಾ ಕಾರ್ಯದರ್ಶಿಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಕರ್ನಾಟಕ

ಮಾನ್ಯರೆ,

ವಿಷಯ:-**45ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವಕ್ಕೆ ಮಕ್ಕಳನ್ನು ನಿಯೋಜಿಸುವ ಬಗ್ಗೆ.**

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯಿಂದ **45ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವವನ್ನು** ದಿನಾಂಕ:20 ರಿಂದ 23 ಸೆಪ್ಟೆಂಬರ್ 2025ರ ವರೆಗೆ ಆನಂದತೀರ್ಥ ವಿದ್ಯಾಲಯ, ಕುಂಜಾರುಗಿರಿ, ಕಟಪಾಡಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇಲ್ಲಿ ಆಯೋಜಿಸಲಾಗಿದ್ದು, ಸದರಿ ಉತ್ಸವಕ್ಕೆ ತಮ್ಮ ಜಿಲ್ಲೆಯ ಆಸಕ್ತ ಕಬ್ಸ್-ಬುಲ್‌ಬುಲ್ಸ್ ಮತ್ತು ದಳನಾಯಕರನ್ನು ಈ ಕೆಳಗಿನ ವಿವರಗಳನ್ನು ಮನಗಂಡು, ನಿಯೋಜಿಸಲು ಕೋರಿದೆ.

| | |
|---|---|
| ಶಿಬಿರ | 45ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವ |
| ಸ್ಥಳ | ಆನಂದತೀರ್ಥ ವಿದ್ಯಾಲಯ, ಕುಂಜಾರುಗಿರಿ, ಕಟಪಾಡಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ |
| ಉತ್ಸವದ ದಿನಾಂಕ | 20.09.2025 ರಿಂದ 23.09.2025 ರವರೆಗೆ. |
| ಹಾಜರಾಗುವ ದಿನಾಂಕ | 20.09.2025 ರ ಬೆಳಗ್ಗೆ 10.00 ಗಂಟೆಯೊಳಗೆ. |
| ಬಿಡುಗಡೆ ಮಾಡುವ ದಿನಾಂಕ | 23.09.2025 ರ ಸಂಜೆ 6 ಗಂಟೆ ನಂತರ ಬಿಡುಗಡೆಗೊಳಿಸಲಾಗುವುದು. (ಅಗತ್ಯವಿದ್ದಲ್ಲಿ 23.09.2025ರಂದು ಶಿಬಿರ ಸ್ಥಳದಲ್ಲಿ ತಂಗಲು ವ್ಯವಸ್ಥೆ ಇದೆ ಹಾಗೂ ದಿ:24.09.2025ರಂದು ಬೆಳಗಿನ ಉಪಹಾರವನ್ನು ನೀಡಲಾಗುವುದು) |
| ನೊಂದಣಿ ಶುಲ್ಕ | ಕಬ್ಸ್-ಬುಲ್‌ಬುಲ್ಸ್‌ಗಳಿಗೆ ತಲಾ ರೂ.400/-ಗಳು. ದಳನಾಯಕರುಗಳು ನೊಂದಣಿ ಶುಲ್ಕವನ್ನು ಪಾವತಿಸುವಂತಿಲ್ಲ. |
| ಯಾರು ಭಾಗವಹಿಸಬಹುದು | ಕನಿಷ್ಠ ತೃತೀಯ ಚರಣ-ಸುವರ್ಣಪಂಖ್ ಪೂರ್ಣಗೊಳಿಸಿದ ಕಬ್-ಬುಲ್‌ಬುಲ್ಸ್‌ಗಳು ಉತ್ಸವಕ್ಕೆ ಭಾಗವಹಿಸಲು ಅರ್ಹರಾಗಿರುತ್ತಾರೆ. |
| ಪ್ರತಿ ಜಿಲ್ಲೆಗೆ ನೀಡಿರುವ ಕೋಟಾ | 12 ಕಬ್ಸ್, 2 ಕಬ್ ಮಾಸ್ಟರ್ಸ್<br>12 ಬುಲ್‌ಬುಲ್ಸ್, 2 ಫ್ಲಾಕ್ ಲೀಡರ್ಸ್ |
| ಆತಿಥ್ಯದ ವ್ಯವಸ್ಥೆ | ಉಡುಪಿ ಜಿಲ್ಲಾ ಸಂಸ್ಥೆಯಿಂದ ಊಟ & ವಸತಿಯ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ. |
| ಚಟುವಟಿಕೆಗಳು | ಸಾಹಸಮಯ ಚಟುವಟಿಕೆಗಳು, ಕರಕುಶಲ ವಸ್ತುಗಳ ತಯಾರಿಕೆ ಗಾಳಿಪಟ ತಯಾರಿಕೆ ಮತ್ತು ಹಾರಾಟ, ಚಿತ್ರಕಲೆ ಮತ್ತು ಪೇಂಟಿಂಗ್, ಮರಿಗಳಿಗೆ ಕಾಡಿನ ಕಥೆಗಳು ಮತ್ತು ಬುಲ್‌ಬುಲ್‌ಗಳಿಗೆ ತಾರಾ ಕಥೆ, ವಸ್ತುಪ್ರದರ್ಶನ, ಆಹಾರ ಮೇಳ, ಫೋಕ್ ಫೆಸ್ಟ್, ರೆಡ್ ಫ್ಲವರ್ ಮತ್ತು ಕಲರವ (ಶಿಬಿರಾಗ್ನಿ). ಪಥ ಚಲನ, ಮೋಜಿನ ಆಟಗಳು, ಪೌರಾಣಿಕ ಕಥಾಭಿನಯ. ಸದರಿ ಚಟುವಟಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳನ್ನು ತಾವೇ ತರಬೇಕು. |
| ಶಿಬಿರದ ವಿಶೇಷತೆ | ಕಬ್-ಬುಲ್‌ಬುಲ್ ಉತ್ಸವದ ವಿಶೇಷ ಚಟುವಟಿಕೆಗಳೊಂದಿಗೆ ಉಡುಪಿ ಶ್ರೀಕೃಷ್ಣ ದೇವರ ದರ್ಶನ, ಮಧ್ವಾಚಾರ್ಯರ ಜನ್ಮಸ್ಥಳ ಪಾಜಕ ಕ್ಷೇತ್ರದ ದರ್ಶನ, ಕುಂಜಾಲಗಿರಿ ಬೆಟ್ಟಕ್ಕೆ ಚಾರಣದ ವ್ಯವಸ್ಥೆ ಮಾಡಲಾಗಿದೆ. |

| | |
|---|---|
| ಶಿಬಿರ ಸ್ಥಳ ತಲುಪುವ ವಿಧಾನ | ಆನಂದತೀರ್ಥ ವಿದ್ಯಾಲಯವು ಉಡುಪಿಯಿಂದ 16 ಕಿ.ಮೀ. ದೂರದಲ್ಲಿದೆ. ಉಡುಪಿ-ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಟಪಾಡಿಯಿಂದ 8 ಕಿ.ಮೀ. ದೂರದಲ್ಲಿ ಆನಂದತೀರ್ಥ ವಿದ್ಯಾಲಯವಿದೆ. ಮುಂಚಿತವಾಗಿ ತಿಳಿಸಿದಲ್ಲಿ, ಉಡುಪಿ ರೈಲ್ವೇ ನಿಲ್ದಾಣ, ಉಡುಪಿ ಸರ್ವೀಸ್ ಬಸ್ ನಿಲ್ದಾಣ, ಕಟಪಾಡಿ ಬಸ್ ನಿಲ್ದಾಣದಿಂದ ಶಿಬಿರ ಸ್ಥಳಕ್ಕೆ ವಾಹನದ ವ್ಯವಸ್ಥೆಯನ್ನು ಮಾಡಲಾಗುವುದು. |
| ಏನನ್ನು ತರುವುದು | 2 ಜೊತೆ ಪೂರ್ಣ ಸಮವಸ್ತ್ರಗಳು, ಬೆಚ್ಚಗಿನ ಲಘು ಹಾಸಿಗೆ, ತಟ್ಟೆ ಮತ್ತು ಲೋಟ, ಹಗ್ಗ, ಲೇಖನಿ ಮತ್ತು ಪೆನ್ಸಿಲ್, ಟಾರ್ಚ್, ನೀರಿನ ಬಾಟಲ್, ಬಕೆಟ್, ಮಗ್, ಶಿಬಿರಾಗ್ನಿ ವಸ್ತುಗಳು, ಕಲರ್ ಪೇಪರ್ಸ್, ಸ್ಕೆಚ್‌ಪೆನ್, ಇತ್ಯಾದಿ, ವಸ್ತು ಪ್ರದರ್ಶನ ಪ್ಲೇ ಆಕ್ಟಿಂಗ್, ತಾರಾ ಕಥೆ, ಜಾನಪದ ನೃತ್ಯಕ್ಕೆ ಬೇಕಾದ ಉಡುಪುಗಳು. |
| ಪ್ರಯಾಣ ವೆಚ್ಚ ಮತ್ತು ನೊಂದಾವಣಿ ಶುಲ್ಕ | ಆಯಾಯ ಶಾಲೆಗಳ ಸ್ಕೌಟ್-ಗೈಡ್ ನಿಧಿಯಿಂದ ಭರಿಸಿಕೊಳ್ಳುವುದು. |
| ಭಾಗವಹಿಸುವವರು ಕಡ್ಡಾಯವಾಗಿ ಈ ಲಿಂಕ್‌ನಲ್ಲಿ ನೊಂದಾಯಿಸುವುದು. | https://zfrmz.in/MjVoR2bcH6sEAUftKZyk<br>15.09.2025ರ ಒಳಗಾಗಿ |
| ಸಂಪರ್ಕಿಸಬೇಕಾದವರ ವಿವರ | ಶ್ರೀಮತಿ ಸುಮನ್ ಶೇಖರ್, ಎಎಸ್‌ಒಸಿ (ಗೈ), ಉಡುಪಿ<br>ಮೊಬೈಲ್ ನಂ. : 9844994576<br>ಶ್ರೀ ಎಂ.ಪ್ರಭಾಕರ್‌ಭಟ್ ಎಸ್‌ಒಸಿ (ಸ್ಕೌ), ಬೆಂಗಳೂರು<br>ಮೊಬೈಲ್ ನಂ. : 9448914540 |
| ಇತರೆ ಮಾಹಿತಿ | ಕಬ್-ಬುಲ್‌ಬುಲ್ ಉತ್ಸವ ಮುಗಿದ ನಂತರ, ಉಡುಪಿ ಜಿಲ್ಲೆಯ ಇತರೆ ಪ್ರವಾಸಿ ಸ್ಥಳಗಳಿಗೆ ಸ್ವಂತ ಖರ್ಚಿನಲ್ಲಿ ಪ್ರವಾಸ ಮಾಡಲು ಇಚ್ಛಿಸುವವರು ಮುಂಚಿತವಾಗಿ ತಿಳಿಸಿದಲ್ಲಿ ಜಿಲ್ಲಾ ಸಂಸ್ಥೆಯವರು ಅವಶ್ಯಕ ವ್ಯವಸ್ಥೆಯನ್ನು ಕಲ್ಪಿಸುತ್ತಾರೆ. |

ಭಾಗವಹಿಸುವ ಕಬ್ಸ್-ಬುಲ್‌ಬುಲ್ಸ್‌ಗಳು ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು ಆಯಾ ಶಾಲಾ ಸ್ಕೌಟ್-ಗೈಡ್ ನಿಧಿಯಿಂದ ಭರಿಸುವುದು. ಆಯಾಯ ಜಿಲ್ಲೆಗಳವರು ತಮ್ಮ ಜಿಲ್ಲೆಗೆ ನೀಡಿರುವ ಕೋಟದನ್ವಯ ಅರ್ಹ ಕಬ್-ಬುಲ್‌ಬುಲ್ಸ್‌ಗಳನ್ನು ಆಯ್ಕೆ ಮಾಡಿ, ಉತ್ತಮ ಪೂರ್ವಸಿದ್ಧತೆಯೊಂದಿಗೆ ನಿಯೋಜಿಸುವುದು. ಹೀಗೆ ಆಯ್ಕೆಯಾದ ಮಕ್ಕಳನ್ನು ಸುರಕ್ಷಿತವಾಗಿ ಕರೆತಂದು, ಸುರಕ್ಷಿತವಾಗಿ ಅವರುಗಳ ಮನೆಗೆ ತಲುಪವವರೆಗೂ ಜವಾಬ್ದಾರಿಯಿಂದ ನೋಡಿಕೊಳ್ಳುವಂತೆ ಸಂಬಂಧಪಟ್ಟ ದಳನಾಯಕರುಗಳಿಗೆ ತಿಳಿಸುವುದು. ಹೀಗೆ ಭಾಗವಹಿಸುವ ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳ ಹೆಸರು ಮತ್ತು ಇತರೆ ವಿವರಗಳನ್ನು ಮೇಲೆ ನೀಡಿರುವ ಲಿಂಕ್‌ನಲ್ಲಿ ದಿನಾಂಕ:15.09.2025ರ ಒಳಗಾಗಿ ನೊಂದಾಯಿಸಿ, ರಾಜ್ಯ ಸಂಸ್ಥೆಗೆ ಕಳುಹಿಸುವುದು. ಸದರಿ ಉತ್ಸವದಲ್ಲಿ ಭಾಗವಹಿಸಲು ನಿಗಧಿತ ದಿನಾಂಕದ ಒಳಗೆ ಬಂದ ಹೆಸರುಗಳನ್ನು ಮಾತ್ರ ಪರಿಗಣಿಸಲಾಗುವುದು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಈ ಬಗ್ಗೆ ಆದ್ಯ ಕ್ರಮ ಕೈಗೊಂಡು, ಕೈಗೊಂಡ ಕ್ರಮಗಳ ಬಗ್ಗೆ ಕೂಡಲೇ ವರದಿ ಮಾಡಲು ಕೋರಿದೆ.

ಸ್ಕೌಟ್ / ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

**ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ:**

1. ರಾಜ್ಯ ಆಯುಕ್ತರು(ಸ್ಕೌ)(ಗೈ)(ವ.ಸಂ.), ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
2. ರಾಜ್ಯ ಜಂಟಿ ಕಾರ್ಯದರ್ಶಿ(ಸ್ಕೌ)(ಗೈ), ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
3. ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರುಗಳು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
4. ಎಲ್ಲಾ ಜಿಲ್ಲಾ ಆಯುಕ್ತರುಗಳು(ಸ್ಕೌಟ್/ಗೈಡ್), ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ, ಕರ್ನಾಟಕ
5. ಎಲ್ಲಾ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳು, ಭಾ.ಸ್ಕೌ.ಗೈ, ಜಿಲ್ಲಾ ಸಂಸ್ಥೆ
6. ಎಲ್ಲಾ ಜಿಲ್ಲಾ ಸಂಸ್ಥೆಗಳಲ್ಲಿಯ ಎಎಸ್‌ಒಸಿ/ಡಿಒ/ಎಸ್‌ಜಿವಿ/ಎಸ್‌ಜಿಎರವರಿಗೆ
7. ಲೆಕ್ಕ ವಿಭಾಗ/ ಕಚೇರಿ ಪ್ರತಿ